doc-21
T-P-2

Regd No M 1229 | 43rd Year | Sri 'Satyavadi' Mysore | 28—3-1959

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಆರಮನೆ ಸಂಸ್ಥೋದ್ಭವ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿಗೆ

Protectthecow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಭಾರತ – ಟಿಬೆಟ್ ಗಡಿ ಬಂದ್ – ಟಿಬೆಟ್‌ನಲ್ಲಿ ಅಶಾಂತಿ

ಖಟಮಂಡು 27 — ಲಾಸಾದಲ್ಲಿರುವ ಚೀನಾ ಸೇನಾ ಕೇಂದ್ರ ಸರ್ಕಾರಿ ವಿದೇಶಿಯರು ಮತ್ತು ವಿದೇಶಿ ನಿಯೋಗಗಳ ಸದಸ್ಯರಿಗೆ ಭಾನುವಿ ಮಾಡಿಕೊಂಡು ಲಾಸಾ ಅಥವಾ ಈಜಿಪ್ಟಿನ ಮತ್ತಾವ ಭಾಗದಲ್ಲಿ ಈಗ ಉಂಟಾಗಿರುವ ಅಶಾಂತಿ ಪರಿಸ್ಥಿತಿಯಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕೈಹಾಕದಿರುವಂತೆ ಕೋರಿದೆ. ಲಾಸಾದಲ್ಲಿ ಕಮ್ಯುನಿಸ್ಟೇತರ ಕಾರ್ಯಕರ್ತರುಗಳೆಂದರೆ ಭಾರತ ಮತ್ತು ನೇಪಾಳದ್ದು ಮೂತ್ರ ಟಿಬೇಟಿನ ಜನ ಟಿಬೆಟಿನಿಂದ ತಪ್ಪಿಸಿಕೊಂಡು ಹೋಗದಂತೆ ನೇಪಾಳ, ಭಾರತ, ಸಿಕ್ಕಿಂ ಮತ್ತು ಭೂತಾನಗಳ ಮತ್ತು ಟಿಬೆಟ್ ಸಂಪರ್ಕ ಗಡಿಗಳನ್ನು ಮುಚ್ಚುವಂತೆ ಚೀನಾ ಸೇನಾಕರಿಸಿ ಆಜ್ಞೆ ಹಿಡಿದೆ.

ಅಪಹರಣ

ವೆಂಗರಾಲಾ 27 — ಗೋವಾದ 6 ಸಿಪಾಯಿಗಳು ಬಾಂದ್ರ ಬಳಿ ಭಾರತ ಪ್ರದೇಶ ಪ್ರವೇಶಿಸಿ ಭಾರತ ಕಾನ್ಸ್ಟೆಬಲ್ ಒಬ್ಬನನ್ನು ಅಪಹರಿಸಿಕೊಂಡು ಹೋದರು.

ಶಾಲೆಗಳ ಆರಂಭ

ಬೆಂಗಳೂರಿನಲ್ಲಿ ಸರ್ವಾನೇಶವಾಗಿರುವ ಮೈಸೂರು ವಿಧಾನ ಸಭೆಯಲ್ಲಿ ವ್ಯವಸಾಯ ಮಂತ್ರಿ ಶ್ರೀ ಕೆ ಎಫ್ ನಾಟೇಕರ ಹೇಳಿಕೆಯಿತ್ತು, ಈ ಸಾಲಿನಲ್ಲಿ ರಾಜ್ಯದಲ್ಲಿ 6 ವ್ಯವಸಾಯ ಶಿಕ್ಷಣ ಪ್ರಾರಂಭಿಸುವುದಾಗಿ ತಿಳಿಸಿದರು

ಈ ಸೇನಿಕರ ಗುಂಡಿನೇಟು

ಕರೀಂಗಂಜ್ 27 — ಇಲ್ಲಿಗೆ ಸ ಇರುವ ಮಹಿಷಾನ ಭಾಗದಲ್ಲಿ ಕಳೆದ ಬುಧವಾರ ನ್ಯಾಯೇತಿಸಿ ಅಲ್ಲಿಂದ ಬ್ರಾಹ್ಮಣ ಜಿಲ್ಲೆಗೆ ಗುಂಡು ಹಾರಿಸು

ಕಾಶ್ಮೀರಕ್ಕೆ ಅನಿರ್ಬಂಧ ಸಂಚಾರ

ಜಮ್ಮು 27 — ಭಾರತ–ಕಾಶ್ಮೀರ ಗಳಲ್ಲಿ ಅನಿರ್ಬಂಧಿತ ಸಂಚಾರ ಏಪ್ರಿಲ್ 1 ನೇ ತಾ|| ನಿಂದ ಜಾರಿಗೆ ಬರುವುದೆಂದು ಕಾಶ್ಮೀರ ಮುಖ್ಯ ಮಂತ್ರಿ ಭಕ್ಷಿ ಗುಲಾಂ ಮಹಮ್ಮದರು ತಿಳಿಸಿದ್ದಾರೆ ರಹದಾರಿ ಪದ್ಧತಿ ಅಂದಿನಿಂದ ರದ್ದಾಗುತ್ತೆ

ನಿಸ್ಸಹಾಯಕ ಸ್ಥಿತಿ

ಬೊಂಬಾಯಿ 27 — ಈಗ ಟಿಬೆಟ್ಟಿನಲ್ಲಿ ಉಂಟಾಗಿರುವ ಪರಿಸ್ಥಿತಿ ಬಗ್ಗೆ ಭಾರತ ಏನು ಮಾಡಲೂ ನಿಸ್ಸಹಾಯಕವಾಗಿದೆ ಎಂದರು ಇಂದಿರಾ ಗಾಂಧಿ

ಗಾದ್ರೆ ಗುರೂಜಿ ಉಸವಾಸ

ಬೊಂಬಾಯಿ 27 — ದಾಮೋದರ ಪ್ರಸೇಕ್ಕೆ ಪೋರ್ಚುಗೀಸು ಅಧಿಕಾರಿಗಳು ತಮಗೆ ಅನುಮತಿ ಕೊಡಲಿಲ್ಲವೆಂದು ಆಚಾರ್ಯ ವಿನೋಬಾರ ಸಂಗಡಿಗ ಗಾದ್ರೆ ಗುರೂಜಿ ಡಾಮನ್ ಗಡಿಯಲ್ಲಿ 14 ದಿನಗಳ ಉಸವಾಸ ಆರಂಭಿಸಿದರು

ಅಶ್ರುವಾಯು ಪ್ರಯೋಗ

ಮಧುರಾ 27 — ನಿನ್ನೆ ನಡೆದ ಪುರಸಭೆ ಚುನಾವಣೆ ಓಟುಗಳ ಎಣಿಕೆ ಪುರಸಭೆ ಕಟ್ಟಡದಲ್ಲಿ ನಡೆಯುತ್ತಿದ್ದಾಗ ಮುಂದೆ ದೊಂಬಿ ಆಗಿ ಪೋಲೀಸರು ಅಶ್ರುವಾಯು ಪ್ರಯೋಗಿಸಿದರು.

ಅಲ್ಯೂಮಿನಿಂ ಕಾರ್ಖಾನೆ

ರೂ 5 ಕೋಟಿಯಿಂದ 7 ಕೋಟಿ ವೆಚ್ಚವರಿಗೆ ಬೆಳಗಾಂನಲ್ಲಿ ಅಲ್ಯೂಮಿನಿಯಂ ಕಾರ್ಖಾನೆ ಸ್ಥಾಪಿಸಲು ಪಶ್ಚಿಮ ಜರ್ಮನಿ ಮುಂದುಬಂದಿರುವುದಾಗಿ ಬೆಂಗಳೂರಿನಲ್ಲಿ ನಿನ್ನೆ ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಬಿ ಡಿ ಜತ್ತಿ ತಿಳಿಸಿದರು

ದೇಶಪಾಂಡೆಗೆ ದಂಡನೆ

ವಾರಣಾಸಿ 27 — ಅಖಿಲ ಭಾರತ ಹಿಂದೂಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ಎ ಜಿ ದೇಶಪಾಂಡೆ ಮತ್ತು ಹಿಂದೂಮಹಾಸಭೆಯ ಕಾರ್ಯಕರ್ತ ಶ್ರೀ ರಣಜಿತ್ ತಿವಾರಿ ಇವರಿಗೆ ವಾರಣಾಸಿ ಮ್ಯಾಜಿಸ್ಟ್ರೇಟರು ತಲಾ 6 ತಿಂಗಳು ಕಠಿಣ ಸಜೆ ವಿಧಿಸಿದರು. ಮೊಗಲರ ಕಾಲದಲ್ಲಿ ಕಾಶಿ ವಿಶ್ವನಾಥ ದೇವಾಲಯವನ್ನು ನಾಶ ಮಾಡಿ ಅಲ್ಲಿ ಮಸೀದಿ ನಿರ್ಮಿಸಿರುವುದಾಗಿ ಹಿಂದುಮಹಾಸಭೆ ಹೇಳಿ, ಪುರಾತನ ವಿಶ್ವನಾಥ ದೇವಾಲಯದ ಪುನರುಜ್ಜೀವನಕ್ಕಾಗಿ ಆಶ್ಯಕ ಶಕ್ತಿ ಸಾಧನೆಗಾಗಿ ಜ್ಞಾನವಾಪಿ ಮಸೀದಿ ಪಕ್ಕದಲ್ಲಿ ಜ್ಞಾನವಾಪಿ ಮಂಟಪದಲ್ಲಿ ವಿನೋಬಾನ ದಿನಾಚರಣೆ ಸಂಬಂಧದಲ್ಲಿ ಮಾರ್ಚ್ 2 ನೇ ತಾ|| ರುದ್ರಾಭಿಷೇಕ ಮಾಡುತ್ತಿದ್ದಾಗ ಬಂಧಿಸಿತ್ತು

ಉಚಿತ ಶಿಕ್ಷಣವಿಲ್ಲ

ರಂಗೂನ್ 27 — ವಿಶ್ವವಿದ್ಯಾನಿಲಯದಲ್ಲಿ ಉಚಿತ ಶಿಕ್ಷಣ ಕೊಡುವದನ್ನು ರಂಗೂನ್ ವಿಶ್ವವಿದ್ಯಾನಿಲಯ ಏಪ್ರಿಲ್ 1 ರಿಂದ ನಿಶೇಧಿಸಿದೆ

ವಿರೋಧ

ರಸ್ತೆ ಸಾರಿಗೆ ವ್ಯವಸ್ಥೆಯನ್ನು ರಾಷ್ಟ್ರೀಕರಣ ಮಾಡುವದನ್ನು ಚಿತ್ರದುರ್ಗ ಬಸ್ ಮಾಲೀಕರ ಸಂಘ ವಿರೋಧಿಸಿದೆ

ನಿಶೇಧ

ಕರಾಚಿ 26 — 54 ನೆಯ ಜುಲೈ 1 ನೇ ತಾ|| ಗೆ ಮೊದಲು ಆದಾದ 618 ಭಾರತೀಯ ಚಿತ್ರಗಳನ್ನು ಪಾಕಿಸ್ತಾನ ಸರ್ಕಾರ ಪ್ರದರ್ಶನದಿಂದ ನಿಶೇಧ ಮಾಡಿದೆ. ಚಿತ್ರಗಳು ಜನಾದರಣೀಯ ಆಗಿರುವುದೇ ಕಾರಣ.

ವಿವಿಧ ವರ್ತಮಾನ

ಬೆಳಗಾಂ 27 — ಖಾನಾಪುರ ತಾಲ್ಲೂಕಿನ ಕಕ್ಕೇರಿ-ಗ್ರಾಮದಲ್ಲಿ ಬೆಂಕಿ ಅನಾಹುತದ ಕಾರಣ ಕಳೆದ ವಾರ 3 ವರ್ಷದ ಹುಡುಗಿ ಮತ್ತು 60 ವರ್ಷದ ವೃದ್ಧೆ ಸಜೀವರು.

ಹೈದರಾಬಾದು 26 — ಸೆಪ್ಟೆಂಬರು ವರಿಗೆ ಈ ವರ್ಷದಲ್ಲಿ ಆಂಧ್ರ ಸರ್ಕಾರ 315294 ಟ್ರಾಕ್ಟರುಗಳನ್ನು, ಅಕ್ಕಿಯನ್ನು ಆಂಧ್ರ ಸರ್ಕಾರ ಹೊಂದಿಸಿದೆ

ಸವದೆಹಲಿ 26— ರಾಜ್ಯ ಸರ್ಕಾರಗಳಿಗೆ 58-59 ರಲ್ಲಿ ರಾಜ್ಯಗಳ ಶೈಕ್ಷಣಿಕಾಭಿವೃದ್ಧಿ ಕಾರ್ಯಕ್ರಮಗಳಿಗೆ ಕೇಂದ್ರದ ನೇರವಿನ ರೂಪದಲ್ಲಿ ಒಟ್ಟು 1131 ಲಕ್ಷ ರೂಗಳನ್ನು ಮಂಜೂರು ಮಾಡಲಾಗಿದೆ ಎಂದೂ, ಮೈಸೂರಿಗೆ 70 ಲಕ್ಷ ರೂಪಾಯಿ ದೊರೆತಿದೆಯೆಂದೂ ಪ್ರಕಟಿತವಾಗಿದೆ.

ಮಾಸ್ಕೋ — ಅವಿರ್ಮನಿಯಾದ 11 ವರ್ಷದ ಕ್ರೀಡಾಪಟು ಕರೇಕ್ ಗ್ರಿಗೋರ್ಯನ್ ಗತಸಪ್ತಾಹದಲ್ಲಿ ಎರಡು ಸಲ ಸೋವಿಯೆತ್ ಪಟು ಲೆಗ್ಯಾಸ್ ಜೆತೆಕ್ಸ್ಯಾನರನ್ನು ಸೋಲಿಸಿದನು ಈ ಪ್ರಥಮ ದರ್ಜೆಯ ಆಟಗಾರರು ಇದನೆಯ ತರಗತಿಯ ವಿದ್ಯಾರ್ಥಿ.

ನ್ಯೂಯಾರ್ಕ್ 23— ಇಲ್ಲಿ ಏಪ್ರಿಲ್ 4 ರಿಂದು ಕೊಲಂಬಿಯಾ ವಿಶ್ವವಿದ್ಯಾನಿಲಯದ ಮಾಕ್ಕಿಲರ್ ಥಿಯೇಟರಿನಲ್ಲಿ ಜರುಗಲಿರುವ ಪ್ರಪಂಚ ನಾಟ್ಯೋತ್ಸವದಲ್ಲಿ ಎಂಟು ದೇಶಗಳ ನೃತ್ಯ ಕಲಾವಿದರು ನರ್ತಿಸುವರು ; ಭಾರತದ ನರ್ತಕ ಭಾಸ್ಕರ್ ಅವರಲ್ಲೊಬ್ಬರು.

ನಾಳೆಯ ಪಂಚಾಂಗ

ಶ್ರೀ ಮಹಾವಿದ್ವಾನ್ ದೈವಜ್ಞಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
29 ಪಂಚಮಿ ಅನೂರಾಧ

ಸರ್ವೋದಯ ತತ್ವ

(ಮುಂದುವರಿದುದು)

ರಾಜನಾಗಲೀ, ರಾಜನ ಸ್ಥಾನದಲ್ಲಿರುವವನಾಗಲೀ ಧರ್ಮ, ಪರಮಾತ್ಮ ಇವರಿಬ್ಬರ ನಡುವೆ ಭಯಭಕ್ತಿಗಳಿಂದ, ಎಚ್ಚರಿಕೆಯಿಂದ ನಡೆಯುದಿದ್ದರೆ ವಂಗನ ಕೈಲಿ ವಾಣಿಕ್ಯವನ್ನು ಕೊಟ್ಟಂತಾಗುವುದಿಲ್ಲವೆ ? ಹಿಂದೆ ರಾಜರು ಧರ್ಮಕ್ಕೆ ಹೆದರುತ್ತಿದ್ದರು ; ಪ್ರಜೆಗಳೂ ಹೆದರುತ್ತಿದ್ದರು : ರಾಜನು ಧರ್ಮದಂಡವನ್ನು ಹಿಡಿದು ತನ್ನ ಅಧಿಕಾರಿಗಳನ್ನು ಕರ್ತವ್ಯಪರಾಯಣರಾಗುವಂತೆ ಮಾಡುವ ಪರಮಾಧಿಕಾರವನ್ನು ಹೊಂದಿದ್ದನು : ಅದುದರಿಂದ ರಾಜ್ಯಯಂತ್ರವು ಸುಸೂತ್ರವಾಗಿ ನಡೆಯುತ್ತಿತ್ತು.

ಈಗ ಎಲ್ಲವೂ ಟೊಳ್ಳಾಗಿರುವುದರಿಂದ ರಾಜಕೀಯ ವ್ಯಧಾರಿಗಳ ಕೈಯಲ್ಲಿ ಸಿಕ್ಕಿರುವ ರಾಜ್ಯವು ಯಾವ ರೂಪವನ್ನಾದರೂ ಹೊಂದಬಹುದು.

ವಿನೋಬಾಜೀಯವರು ಕ್ರಾಂತಿಪುರುಷರು , ಅವರ ಭಾವನೆಯೆಲ್ಲ ಸತ್ಯ ಯುಗದ ನೀತಿಯನ್ನನುಸರಿಸುವುದು ; ಆದರೆ ಅವರ ರಾಜಕೀಯ ಸ್ಥಾನಕ್ಕೆ, ತಪ ಶ್ಯಕ್ತಿಗೆ ತಲೆಬಾಗಿ ಅವನನ್ನು ಹಿಂಬಾಲಿಸುವುದರಲ್ಲಿರುವ ಉತ್ಸಾಹವು ಅದನ್ನು ಆಚರಣೆಗೆ ತರುವುದರಲ್ಲಿ ಖಂಡಿತಾ ಇರುವುದಿಲ್ಲ ; ಏಕೆಂದರೆ ಅದು ಅನಸೂಣೆಯು ಕಷ್ಟ ಭೂದಾನವನ್ನೇನೋ ಜನರು ಅರ್ಥಮಾಡಿಕೊಳ್ಳುತ್ತಾರೆ : ಸಂಪತ್ತಿ ದಾನವೂ ಹಾಗೆಯೇ. ಆದರೆ ಗ್ರಾಮದಾನದ ವಿಷಯ ಬಂದಾಗ ಸಮಸ್ಯೆಯು ಅರ್ಥವಾಗುವುದಿಲ್ಲ. ದಾನವನ್ನು ಕೊಡುವವರು ಯಾರು , ದಾನದ ಸ್ವರೂಪ ವೇನು ? ಗ್ರಾಮದಲ್ಲಿರುವ ಎಲ್ಲ ಜನಗಳ ಆದಂಲ್ಲಿಯೂ ಅಲ್ಪಸಂಖ್ಯಾತ ಕೋಮುಗಳ ಜನರ ಮನಸ್ಸು ಸಾಮೂಹಿಕ ಕಾರ್ಯಕ್ರಮಕ್ಕೆ ಸಿದ್ಧವಾಗಿ ಸ್ವಸ್ಥಂ ತೋಷದಿಂದ ತಮ್ಮ ಗ್ರಾಮವನ್ನು ವಿನೋಬಾಜೀಯವರ ಮೂಲಕ ಪರಮಾತ್ಮ ನಿಗೆ ಅರ್ಪಿಸಿ, ಅದರ ಫಲವನ್ನು ಸಂತೋಷದಿಂದ ಸಮವಾಗಿ ಹಂಚಿಕೊಳ್ಳುವ ಕ್ರಾಂತಿಕಾರಿ ಶಂವಿಧಾನವನ್ನು ಈ ಗ್ರಾಮದಾನದ ರಹಸ್ಯವೆಂದು ನಾವು ಭಾವಿ ಸುತ್ತೇವೆ ; ಆದಿಲ್ಲದಿದ್ದರೆ ವಿನೋಬಾಗದಲ್ಲಿ, ವಿತರಣೆಯಲ್ಲಿ ಅನರ್ಥಪರಂಪರೆಯಾ ಗುವ ಸಂಭವವಿದೆ. ಹಾಗೆಯೇ ತಾಲ್ಲೂಕದಾನದ ಜಳುವಳಿಯಲ್ಲಿ ಇದಕ್ಕೂ ಹೆಚ್ಚಿನ ಬಹು ಮುಖ್ಯ ಜವಾಬ್ದಾರಿ ಇರುವುದೆಂದು ನಾವು ಭಾವಿಸುತ್ತೇವೆ ; ಸ್ವಾರ್ಥ ಮತ್ತು ಜಾತೀಯತೆಯ ಮನೋಭಾವದಿಂದ ಪ್ರೇರಿತರಾದ ವ್ಯಕ್ತಿಗಳಿಗೆ ಆಡಳಿತಾಧಿಕಾರಗಳು ಬರಬಾರದು ; ನಿಸ್ವಾರ್ಥ, ದೇಶಪ್ರೇಮೀ, ಭಗವದ್ಭಕ್ತ, ಸರ್ವ ಸಮಭಾವನೆಗಳುಳ್ಳ ವ್ಯಕ್ತಿಗಳು ಸಮಾಜಸೇವಾ ದೀಕ್ಷಾಬದ್ಧರಾಗಿ ಜನ ರೂಪೀ ಜನಾರ್ದನನ ಸೇವೆಗೆ ಮುನ್ನುಗ್ಗುವರೆಂದು ಹಾರೈಸುತ್ತೇವೆ. [ಸೇ. ಸ]

ಒಳಗೆ 26 ಚಂಡುಗಳಿರುವ ದಂತದ ಚೆಂಡು 22 ವರ್ಷಗಳಿಂದ ವಿಹಲಯುಲ್ಲಿ ದಂತದ ಕೆಲಸ ಮಾಡುತ್ತಿರುವ ಭಗತ್ ಭೀಮ ಸೇನರು ಇದನ್ನು ಕಪಾರಿಸಿದ್ದಾರೆ

Our Bangalore Sales Depot address—
71 / 4 Arcot Sreenivasachar St., Bangalore 2.

ವುಡ್‌ಲ್ಯಾಂಡ್ಸ್ ಯಶಸ್ವಿ 3 ನೇ ವಾರ

ಕಾಲಾಪಾನಿ (ಹಿಂದಿ)

ಅತ್ಯುತ್ತಮ ಪತ್ತೇದಾರಿ ಕಥಾವಸ್ತು — | ದಿನ 3 ಪ್ರದರ್ಶನಗಳು

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಚಿತ್ರ -- ನೋಡಲು ಮರೆಯಬೇಡಿ

ತಾರಾಗಣ— ದೇವ್‌ಆನಂದ್, ಮಧುಬಾಲ, ನಳಿನಿಜಯವಂತ್, ಕಿಶೋರ್‌ಸಾಹು

ದಿಗ್ದರ್ಶನ : ರಾಜ್ ಖೋಸ್ಲ ಸಂಗೀತ : ಎಸ್. ಡಿ. ಬರ್ಮನ್

ಅಪೆರಾ— 28-3-59 ರಿಂದ

ಸಿಂದ್‌ಬಾದ್ ಕೆ ಬೇಟಿ

ನಾದಿಯಾ – ಪ್ರಾಣ್ – ಜಯರಾಜ್ ಪಾರ್ಟ್‌ಮಾಡಿರುವ

ಮನಮೋಹಕ ಹಿಂದಿ ಚಿತ್ರ

ಪ್ರತಿದಿನ 3 ಆಟಗಳು

SHAKTI SUDHA

A Superb Tonic

ಗೋರಕ್ಷಣ, ಪ್ರಾಣದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

Edited, Printed & Published by Dharma Prachara Nurala M. Krishna Rao, at the Satyavadi Press Chamarajapuram, Mysore